# ಕರ್ನಾಟಕ ವಿಧಾನ ಪರಿಷತ್ತು

## ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

## **ಚುಕ್ಕೆ ರಹಿತ ಪ್ರಶ್ನೆ**

ದಿನಾಂಕ : 31-03-2021 ಪ್ರಶ್ನೆ ಸಂಖ್ಯೆ : 3000 (2533)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರ ನೀಡಬೇಕಾದ ದಿನಾಂಕ : 31-03-2021

ಉತ್ತರಿಸುವ ಸಚಿವರು: ಸಮಾಜ ಕಲ್ಯಾಣ ಸಚಿವರು

ವಿಷಯ : ಪಿ.ಟಿ.ಸಿ.ಎಲ್. ಕಾಯಿದೆಗೆ ತಿದ್ದುಪಡಿ

(ಅ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಹಿತದೃಷ್ಟಿಯಿಂದ ತಂದಿದ್ದ ಪಿ.ಟಿ.ಸಿ.ಎಲ್. ಕಾಯಿದೆ 1978ರಲ್ಲಿ ಸರ್ಕಾರದಿಂದ ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ಮಂಜೂರಾಗಿದ್ದ ಜಮೀನನ್ನು ಬೇರೆಯವರಿಗೆ ಪರಭಾರೆ ಮಾಡುವುದನ್ನು ನಿಷೇಧಿಸಿದ್ದು, ಒಂದು ವೇಳೆ ಪರಭಾರೆ ಮಾಡಿದ್ದರೂ ಸಹ ಮತ್ತೆ SC/ST ಯವರಿಗೆ ವಾಪಸ್ ಕೊಡಿಸಲು ಅವಕಾಶ ಕಲ್ಪಿಸಿರುವುದು ನಿಜವಲ್ಲವೇ ;

(ಆ) ಈ ರೀತಿ ಪರಭಾರೆ ಮಾಡಿದ ಜಮೀನುಗಳನ್ನು ವಾಪಸ್ ಕೊಡಿಸಬೇಕೆಂದು ಕಾಯಿದೆಯಲ್ಲಿದ್ದರೂ ಅಪೀಲು ಹೋದಾಗ ಅನೇಕ ಅಸಿಸ್ಟೆಂಟ್ ಕಮೀಷನರ್ ಮತ್ತು ಡೆಪ್ಯೂಟಿ ಕಮೀಷನರ್‌ಗಳು SC/ST ಯವರ ವಿರುದ್ಧವಾಗಿ ತೀರ್ಪು ನೀಡುತ್ತಿದ್ದು, ಇದರಿಂದ ಈ ಜನಾಂಗದವರಿಗೆ ಅನ್ಯಾಯವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಭಾರತದ ಸರ್ವೋಚ್ಚ ನ್ಯಾಯಾಲಯದಲ್ಲಿ ನೆಕ್ಕುಂಟಿ ರಾಮಲಕ್ಷ್ಮಿ ವಿರುದ್ಧ ಕರ್ನಾಟಕ ಸರ್ಕಾರ ಮತ್ತು ಇನ್ನೊಂದು ಪ್ರಕರಣದಲ್ಲಿ ಪಿ.ಟಿ.ಸಿ.ಎಲ್. ಕಾಯಿದೆಯಲ್ಲಿ ಕಾಲಮಿತಿ ನಿಗದಿಗೊಳಿಸಬೇಕಾಗಿತ್ತೆಂದು ತಿಳಿಸಿರುವುದರಿಂದ ಅನೇಕ SC/ST ಜನಾಂಗಕ್ಕೆ ಅನ್ಯಾಯವಾಗುತ್ತಿದ್ದು ಕೆಲವು ಸಮಸ್ಯೆಗಳನ್ನು ಸರಿಪಡಿಸಲು ಪರಿಶಿಷ್ಟ ಜಾತಿ/ವರ್ಗಗಳ ಕೆಲ ಜಮೀನುಗಳ ಪರಭಾರೆ ನಿಷೇಧ ಕಾಯಿದೆ 1978ಕ್ಕೆ ಸರ್ಕಾರ ಸಮಗ್ರ ತಿದ್ದುಪಡಿ ತಂದು ಇವರ ಹಿತ ಕಾಪಾಡಲು ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ ;

(ಈ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಹಿತದೃಷ್ಟಿಯಿಂದ ಈ ಸಮಗ್ರ ತಿದ್ದುಪಡಿಯನ್ನು ಯಾವ ಕಾಲಮಿತಿಯೊಳಗೆ ತರಲಾಗುವುದು ?